### ಬೆಳಕಿನ ಹಬ್ಬ ಬಾಳಲ್ಲಿ ಉಂಟು ಮಾಡದಿರಲಿ ಕತ್ತಲು

# ಪಟಾಕಿಗೆ ಬೆಂಕಿ ಹಚ್ಚುವ ಮುನ್ನ...

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಳಕಿನ ಹಬ್ಬ ದೀಪಾವಳಿ ಮನೆಯಂಗಳದಲ್ಲೇ ಬಂದು ನಿಂತಿದೆ. ಈಗೀಗ ದೀಪಾವಳಿಯಲ್ಲಿ ದೀಪಗಳಿಗಿಂತಲೂ ಮೊದಲ ಸ್ಥಾನ ಸಿಡಿಮದ್ದುಗಳಿಗೆ. ತಮ್ಮ ಬಜೆಟ್‌ಗೆ ಹೊಂದುವಂತೆ ಅಥವಾ ಕಡ ತಂದಾದರೂ ಸಿಡಿಮದ್ದು ಕೊಳ್ಳುವುದು ಸಾಮಾನ್ಯ. ಆದರೆ, ಪಟಾಕಿ ನಮ್ಮ ಬಾಳಿಗೇ ಕೊಳ್ಳಿ ಇಡುವಂತಾಗಬಾರದು. ಮಕ್ಕಳ ಹಟಕ್ಕೆ ದೊಡ್ಡವರು ಮಣಿಯದಿದ್ದರೆ ಅಪಾಯವನ್ನು ದೂರವಿಡಬಹುದು.

**ಪಟಾಕಿ ಸುಡುತ್ತೀರಾ...ನಿಲ್ಲಿ..**

* ದೊಡ್ಡವರ ಸಮ್ಮುಖದಲ್ಲೇ ಮಕ್ಕಳು ಪಟಾಕಿ ಸುಡಬೇಕು.

* ಭಾರಿ ಸದ್ದು ಮಾಡುವ 'ಆಟಂ ಬಾಂಬ್' ಬೇಡ. ಆ ಸದ್ದು ಕಿವಿ-ಹೃದಯಕ್ಕೆ ಅಪಾಯ ತಂದೀತು.

* ಹಚ್ಚಿದ ಪಟಾಕಿ ಹೊತ್ತಿಕೊಳ್ಳಲಿಲ್ಲ ಎಂದು ಓಡಿಹೋಗಿ ಎತ್ತಿಕೊಳ್ಳಬೇಡಿ.

* 'ಟುಸ್' ಎಂದ ಪಟಾಕಿ ಮೇಲೆ ನೀರು ಸುರಿಯಿರಿ.

* ಫ್ಲವರ್ ಪಾಟ್ ಕೈಯಲ್ಲಿ ಹಿಡಿದು ಕೊಳ್ಳಬೇಡಿ.

* ಪಟಾಕಿ ಹಚ್ಚುವಾಗ ಧರಿಸಲೆಂದೇ ಲಭ್ಯವಿರುವ ಕನ್ನಡಕ ಧರಿಸಿಕೊಳ್ಳಿ.

* ಪಟಾಕಿ ಹಚ್ಚುವಾಗ ನಿಮ್ಮ ಸುತ್ತಮುತ್ತ ಯಾರಿದ್ದಾರೆ ಎಂದು ಗಮನಿಸಿ.

* ಮಕ್ಕಳು, ಮಹಿಳೆಯರು ಇದ್ದರೆ ನೀವು ಪಟಾಕಿ ಹಚ್ಚುತ್ತಿರುವ ಸಂಗತಿ ಅವರ ಗಮನಕ್ಕೆ ತನ್ನಿ.

* ರಾಕೆಟ್ ಬೇಡವೆ ಬೇಡ. ಅದು 'ಹಾದಿ ತಪ್ಪಿ' ಎಲ್ಲೋ ಬೀಳಬಹುದು; ಅಪಾಯಕ್ಕೆ ಎಡೆ ಮಾಡಿಕೊಡಬಹುದು.

ಗ್ರಾಫಿಕ್: ಎಸ್. ವಿಷ್ಣು



**ಸುಟ್ಟ ಗಾಯ ಆದಾಗ ಹೀಗೆ ಮಾಡಿ...**

* ಪಟಾಕಿಯಿಂದ ಕಿಡಿ ಹಾರಿದಾಗ ಅಥವಾ ಕೈಯಲ್ಲೇ ಸಿಡಿದಾಗ ತಕ್ಷಣವೇ ಗಾಯದ ಸ್ವರೂಪ ಸ್ಪಷ್ಟಪಡಿಸಿಕೊಳ್ಳಿ.

* ಗಾಯವನ್ನು ತಣ್ಣೀರಲ್ಲಿ (ಟ್ಯಾಪ್ ನೀರೂ ಆದೀತು) ತೊಳೆಯಿರಿ.

* ಕಾಫಿ ಪುಡಿ, ಎಣ್ಣೆಯಂತಹ ಪದಾರ್ಥಗಳನ್ನು ಗಾಯದ ಮೇಲೆ ಹಚ್ಚಲೇಬೇಡಿ.

* ತಕ್ಷಣ ವೈದ್ಯರನ್ನು ಸಂಪರ್ಕಿಸಿ.

* ಕಣ್ಣಿಗೆ ಗಾಯವಾಗಿದ್ದರೆ ಕಣ್ಣನ್ನು ಭದ್ರವಾಗಿ ಮುಚ್ಚಿಕೊಳ್ಳಿ, ಉಜ್ಜುವುದು ಬೇಡವೇ ಬೇಡ.

* ತಣ್ಣೀರಿನಿಂದ ಚೆನ್ನಾಗಿ ತೊಳೆಯಿರಿ.

* ತಕ್ಷಣ ನೇತ್ರ ತಜ್ಞರನ್ನು ಭೇಟಿಯಾಗಿ.

**ಪಟಾಕಿ ಬದುಕನ್ನೇ ಸುಟ್ಟೀತು ಜೋಕೆ....**

ಮೊದಲೇ ವಾಯುಮಾಲಿನ್ಯದ ಆಗರವಾಗಿರುವ ಬೆಂಗಳೂರಿನಂತಹ ನಗರದಲ್ಲಿ ಪಟಾಕಿ ಹೊಗೆಯಿಂದ ಅಸ್ತಮಾದಂತಹ ಕಾಯಿಲೆ ಹೆಚ್ಚಾಗುವ ಭೀತಿಯೂ ಇದೆ.

'ಕಳೆದ ವರ್ಷ ದೀಪಾವಳಿ ಸಂದರ್ಭದಲ್ಲಿ ಒಟ್ಟು 40 ಮಕ್ಕಳು ದಾಖಲಾಗಿದ್ದರು. ಈ ಪೈಕಿ ಇಬ್ಬರು ಶಾಶ್ವತ ಕುರುಡರಾಗಿದ್ದಾರೆ' ಎಂದು ನಾರಾಯಣ ನೇತ್ರಾಲಯದ ಮಕ್ಕಳ ನೇತ್ರ ರೋಗ ತಜ್ಞ ಡಾ. ಅರುಣ್ ಸಂಪ್ರತಿ ಹೇಳುತ್ತಾರೆ.

ಅಂದು ದಾಖಲಾದವರಲ್ಲಿ ಹೆಚ್ಚಿನ ಮಕ್ಕಳು 'ಟುಸ್' ಎಂದ ಪಟಾಕಿಯನ್ನು ಮತ್ತೆ ಹಚ್ಚಲು ಹೋದವರು. ದೃಷ್ಟಿ ಕಳೆದುಕೊಂಡ ಇಬ್ಬರು ನತದೃಷ್ಟರೂ 'ರಾಕೆಟ್'ಗೆ ಬಲಿಯಾದವರು.

'ನಕ್ಷತ್ರ ಕಡ್ಡಿ, ಫ್ಲವರ್ ಪಾಟ್‌ನಂತಹ ಪಟಾಕಿಗಳನ್ನು ಮುಖದ ಹತ್ತಿರ ಹಿಡಿದುಕೊಳ್ಳುವುದರಿಂದ ಕಣ್ಣುಗುಡ್ಡೆ (ಕಾರ್ನಿಯಾ) ಒಡೆಯಬಹುದು, ಅಕ್ಷಿಪಟಲ (ರೆಟಿನಾ)ಗೆ ಗಾಯವಾಗಬಹುದು, ಒಳಗಿಂದೊಳಗೇ ರಕ್ತಸ್ರಾವವಾದೀತು (ಇದು ನಮ್ಮ ಗಮನಕ್ಕೆ ಬರುವುದಿಲ್ಲ). ಆದ್ದರಿಂದ ಸಾಕಷ್ಟು ಅಂತರ ಇಟ್ಟುಕೊಂಡು ಪಟಾಕಿ ಸುಡಬೇಕು' ಇದು ಅವರ ಸಲಹೆ.

**ಇಲ್ಲಿ ಅಹರ್ನಿಶಿ ಸೇವೆ ಲಭ್ಯ...**

* ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಸುಟ್ಟ ಗಾಯಗಳ ಚಿಕಿತ್ಸಾ ವಿಭಾಗವಿದೆ (ಈ ಸೌಲಭ್ಯವಿರುವ ಏಕೈಕ ಸರ್ಕಾರಿ ಆಸ್ಪತ್ರೆ ಇದು). ದೀಪಾವಳಿ ಸಂದರ್ಭದಲ್ಲಿ ವಿಶೇಷ ಘಟಕ ತೆರೆಯಲಾಗುತ್ತದೆ. ದೂರವಾಣಿ ಸಂಖ್ಯೆ 080 2670 1150 (ವಿಸ್ತರಣೆ 264).

* ಇಸ್ಕಾನ್ ದೇವಾಲಯದ ಬಳಿ ಇರುವ ನಾರಾಯಣ ನೇತ್ರಾಲಯವೂ 24 ಗಂಟೆ ಸೇವೆ ನೀಡುವ ತುರ್ತು ಚಿಕಿತ್ಸಾ ಘಟಕ ತೆರೆಯಲಿದೆ. ಒಂದು ವಾರ ಕಾಲ ಈ ಘಟಕ ಕಾರ್ಯ ನಿರ್ವಹಿಸಲಿದೆ.

ದೂರವಾಣಿ ಸಂಖ್ಯೆ-2337 3311/ 2357 6855 ಅಥವಾ ಡಾ. ಅರುಣ್ ಸಂಪ್ರತಿ-98454 23955.

ಮಾಹಿತಿ ತಂತ್ರಜ್ಞಾನ ಕಂಪನಿಗಳ ಕನ್ನಡ ವಿರೋಧಿ ಧೋರಣೆ ಪ್ರತಿಭಟಿಸಿ ವಾಟಾಳ್ ಬಹಿಷ್ಕಾರ